Sri J P. SARVESH.—May I know the difference between the Fish Farm and Nursery :

Mr. SPEAKER.—Fish Farm is a bigger farm. Nursery is meant for rearing fry or fingerlings.

† ಶ್ರೀ ಬಿ. ರಾಚಯ್ಯ —ಫಿಷ್ ಫಾರಂ ಎಂದರೆ ದೊಡ್ಡದು, ನರ್ಸರಿ ಚಿಕ್ಕದು.

Sri J. P. SARVESH.—Will the Government propose to start Fish Farm in Gulbarga ?

Sri B. RACHAIAH.—There is a proposal to start Fish Farm at Raichur District In Gulbarga Division.

Collection of Loan Instalments.

*Q.—138. Sri S. V. RAME GOWDA (Malur).—

Will the Government be pleased to state :—

Whether they would issue orders to collect during the year 1966-67 the loan insalments due from the ryots for the years 1965-66 levying only ordinary interest instead of penal interest in view of the scarcity conditions prevailing in the State this year ?

A.—Sri M. V. KRISHNAPPA (Minister for Revenue).—

Whenever loan insalments are postponed on account of scarcity onditions in a particular area, penal interest is not lived. The question of issuing orders in this respect does not arise.

ಶ್ರೀ ಎಸ್. ವಿ. ರಾಮೇಗೌಡ.—ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಇದ್ದರೂ ಕೂಡ ಸಾಲದ ಕಂತುಗಳನ್ನು ವಸೂಲು ಮಾಡಬಾರದೆಂದೇಕೆ ಆದೇಶ ಕೊಟ್ಟಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿ ಬೆಳೆಯಾಗಿಲ್ಲ ಅಲ್ಲಿ ಕಂದಾಯ ವಸೂಲು ಮಾಡಬೇಕಾಗಿಲ್ಲ ಮತ್ತು ಕಂದಾಯದ ರೂಪವಾದ ಬೇರೆ ಬಾಕಿಗಳನ್ನೂ ವಸೂಲು ಮಾಡಬಾರದು ಎಂದು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆ. ಅವರಿಗೆ ಆ ಬಗ್ಗೆ ಪೂರ್ಣ ಅಧಿಕಾರವಿದೆ.

ಶ್ರೀ ಎಸ್. ವಿ. ರಾಮೇಗೌಡ.—ಹಾಗೆ ತಾವು ಬರೆದಿರುವುದು- ಬರೆದಿಲ್ಲದಿರುವುದು ಜನರಿಗೆ ಹೇಗೆ ಗೊತ್ತಾಗಬೇಕು ? ಅಧಿಕಾರಿಗಳು ತಮಗೆ ಆರ್ಡರು ಬಂದಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಕಾದರೆ ನಾವು ಬರೆದಿರುವ ಪತ್ರದ ಕಾಪಿಯನ್ನು ತಮಗೆ ಕಳುಹಿಸುತ್ತೇನೆ.

ಶ್ರೀ ಜಿ. ವಿ. ಗೌಡ.—ಜಿಲ್ಲಾಧಿಕಾರಿಗಳು ಅಭಾವ ಪ್ರದೇಶದಲ್ಲಿ ತಾವು ಕೊಟ್ಟಿರುವ ಆದೇಶದಂತೆ ನಡೆದುಕೊಳ್ಳುತ್ತಿಲ್ಲ. ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯದ ವಸೂಲು ಖಿನ್ನ ಫೆಬ್ರವರಿಯಿಂದ ಪ್ರಾರಂಭವಾಗುವುದು. ನವೆಂಬರು ಮತ್ತು ಡಿಸೆಂಬರು ತಿಂಗಳುಗಳಲ್ಲಿ ಎರಡು ಸಲ ಜಿಲ್ಲಾಧಿಕಾರಿಗಳಿಗೆ ಬರೆದು ತಿಳಿಸಿದ್ದೇವೆ. ಅವರು ಪ್ರವಾಸಮಾಡಿ ಎಲ್ಲಿ ಕಂದಾಯ ವಸೂಲು ಮಾಡುವುದು ಉಚಿತವಲ್ಲವೆಂದು ತೋರುತ್ತದೋ ಅಲ್ಲಿ ಮಾಡಬಾರದೆಂದು ತಿಳಿಸಿದ್ದೇವೆ. ನಾವೇ ತೀರ್ಮಾನ ಮಾಡುವುದಾದರೆ ನಿಧಾನವಾಗಬಹುದು ಎಂದು ಸ್ಥಳೀಯ ಅಧಿಕಾರಿಗಳಿಗೆ ಈ ಅಧಿಕಾರ ಕೊಡಲಾಗಿದೆ. ಜೇಕಾದರೆ

1-30 P.M.

ಮತ್ತೆ ಬರೆದು ತಿಳಿಸುತ್ತೇವೆ. ಕೆಲವು ಕಡೆ ರೈತರು ಕಂದಾಯ ಕಟ್ಟಲು ತೊಂದರೆಯಾಗಿ ತಾಪತ್ರಯವಾಗಿರುವುದರಿಂದ, ನಿಧಾನವಾಗಿ ವಸೂಲುಮಾಡುವಂತೆ ಜಿಲ್ಲಾಧಿಕಾರಿಗಳಿಗೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಸರ್ಕ್ಯುಲರ್‌ನ್ನು ಕಳಿಸಬೇಕೆಂದು, ಮತ್ತು ಕೆಲವು ಕಡೆ ಶ್ರೀಮಂತರು ಮಾತ್ರ ಕಂದಾಯ ಕಟ್ಟಿಲ್ಲ ವೆಂದು ಶ್ರೀವಾತ್ ರೇವಣ್ಣಸಿದ್ದಪ್ಪನವರು ಹೇಳಿದರು, ಅವನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ—ಸ್ವಾಮಿ, ಈಗ ಕಂದಾಯ ಕಟ್ಟಲು ಶಕ್ತಿ ಇಲ್ಲದಿರು ವಾಗ ರ್ಯಾಂಡ್ ರೆವಿನ್ಯೂ ಬ್ಯಾಂಕ್‌ಗಳವರು ಕಡ್ಡಾಯವಾಗಿ ವಸೂಲುಮಾಡುತ್ತಿದ್ದಾರೆ. ಅವರಿಗೆ ಸರಿಯಾದ ತಿಳಿವಳಿಕೆ ಕೊಟ್ಟು ಜನಗಳಿಗೆ ಅನುಕೂಲ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಿಚಾರವನ್ನು ಜಿಲ್ಲಾಧಿಕಾರಿಗಳನ್ನು ಕೇಳಿ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರಾಜ್ಯದ ವಿಷಯದಲ್ಲಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ, ವೆಂದು ಸ್ಥಳೀಯ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಈಗ ಹೇಳಿದರಿ ; ಆ ಅಧಿಕಾರಿ ಗಳಿಗೆ ನೀವು ಯಾವ ಯಾವ ಭಾಗಗಳಲ್ಲಿ ಅಭಾವವಿವೆ, ಯಾವ ಯಾವ ರೀತಿ ಕಂದಾಯ ವಸೂಲು ಮಾಡಬೇಕೆಂದು, ಕಂತುಗಳನ್ನು ಯಾವ ರೀತಿ ವಸೂಲು ಮಾಡಬೇಕು ಎಂದು ತಿಳಿಸಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳಿಗೆ ಯೂನಿಫಾರಂ ಆಗಿ ಬರೆದಿದ್ದೇವೆ. ಅಲ್ಲದೆ ಯಾವಯಾವ ಪ್ರದೇಶಗಳಲ್ಲಿ ಬೆಳೆಯಾಗದೆ ಇದ್ದರೆ ಅಂಥ ಪ್ರದೇಶಗಳಲ್ಲಿ ಕಂದಾಯವನ್ನು ವಸೂಲು ಮಾಡಕೂಡದೆಂದು ಹೇಳಿದ್ದೇವೆ. ಮೈಸೂರು ಸಂಸ್ಥಾನದಲ್ಲಿ ಬೆಳೆ ಎಷ್ಟಾಗಿದೆ, ಎಷ್ಟಾಗಿಲ್ಲ ಎಂಬು ದರ ಡಿಟೈರ್ಡ್ ರಿಪೋರ್ಟ್ ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಿಲ್ಲಾಧಿಕಾರಿಗಳಿಗೆ ಸರಿಯಾದ ತಿಳಿವಳಿಕೆಯನ್ನು ನೀವು ಕೊಟ್ಟ ದ್ದರೂ ಸಹ, ಅವರು ರೈತರಿಂದ ತಕಾವಿ ಹಣ, ಪಿನಲ್ ಇಂಟರೆಸ್ಟ್, ಕಂದಾಯಗಳನ್ನು, ಈಗ ಕೊಡುವಿದ್ದರೆ ಮುಂದೆ ನಿಮಗೇ ಭಾರವಾಗುತ್ತದೆ, ಈಗಲೇ ಕೊಡಿ ಎಂದು ವಸೂಲುಮಾಡುತ್ತಿ ದ್ದಾರೆ, ಕೆಲವರು ಬಹಳ ಕಷ್ಟದಲ್ಲಿರುವುದರಿಂದ ದನಕರುಗಳನ್ನು ಮಾರಿ ಕಂದಾಯವನ್ನು ಕಟ್ಟು ತ್ತಿದ್ದಾರೆ, ಈ ವಿಚಾರದಲ್ಲಿ ತಾವು ಜಿಲ್ಲಾಧಿಕಾರಿಗಳಿಗೆ ಸರಿಯಾದ ತಿಳಿವಳಿಕೆ ಕೊಡುತ್ತೀರಾ ?

ಶ್ರೀ ಎಂ. ವಿ ಕೃಷ್ಣಪ್ಪ.—2—3 ತಿಂಗಳ ಹಿಂದೆ ಅಂದರೆ, 21-12-1965ರಲ್ಲಿ ಒಂದು ಸರ್ಕ್ಯುಲರ್ ಹೊರಡಿಸಿ ಅದರ ಪ್ರಕಾರ ನಡೆಯುವಂತೆ ತಿಳಿಸಿದೆ.

ಶ್ರೀ ಎಸ್. ಶಿವಪ್ಪ.—ಮೈಸೂರು ಸಂಸ್ಥಾನದಲ್ಲಿ ಅನೇಕ ಭಾಗಗಳಲ್ಲಿ ಸಾಮೂಹಿಕವಾಗಿ ಮಳೆಯಾಗದೆ, ಆಹಾರಾಭಾವ ತಾಂಡವಾಡುತ್ತಿರುವುದರಿಂದ, ಆ ಭಾಗಗಳಲ್ಲಿ ಕಂದಾಯವನ್ನು ರದ್ದು ಮಾಡಬೇಕೆಂದು ತಾವು ಏಕೆ ಒಂದು ನೇರವಾದ ಆಜ್ಞೆಯನ್ನು ತೀರ್ಮಾನ ತೆಗೆದುಕೊಳ್ಳಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ವರ್ಷದ ಪ್ರಾರಂಭದಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಲ್ಲಿ ಆಹಾರಾಭಾವವಿತ್ತು. ಕೊನೆಯಲ್ಲಿ ಮೈಸೂರು ಸಂಸ್ಥಾನದ ಕೆಲವುಕಡೆಗಳಲ್ಲಿ ಮಳೆಬಂದು ಕೆಲವು ಕಡೆ 8 ಆಣೆ ಭಾಗ, ಕೆಲವು ಕಡೆ 10 ಆಣೆ ಭಾಗ ಬೆಳೆ ಬಂದಿವೆ. ಎಲ್ಲಿ 4 ಆಣೆ ಭಾಗದ ಬೆಳೆ ಬಂದಿದೆಯೋ ಅಲ್ಲೆಲ್ಲಾ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದೆ. ಅವರು ತೆಗೆದುಕೊಳ್ಳದಿದ್ದರೆ ಮತ್ತೊಮ್ಮೆ ತಿಳಿಸುತ್ತೇವೆ.

ಶ್ರೀ ಎಸ್. ವಿ. ರಾಮೇಗೌಡ.—ನಮ್ಮ ಕಡೆ ಜಿಲ್ಲಾಧಿಕಾರಿಗಳು ನಮಗೆ ಸರ್ಕಾರದಿಂದ ನಿರ್ದಿಷ್ಟವಾದ ಆದೇಶ ಬಂದಿಲ್ಲ, ಸರ್ಕಾರದಿಂದ ಬರುವವರೆಗೂ ಕಂದಾಯ ವಸೂಲು ಕ್ರಮವನ್ನು ನಿಲ್ಲಿಸುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ನೀವು ಇಬ್ಬರೂ ಸೇರಿ ಅಲ್ಲಿಗೆ ಹೋಗಿ ವಿಚಾರಿಸೋಣ ಬನ್ನಿ.

ಶ್ರೀ ಜಿ. ವಿ. ಗೌಡ.—ಬಾವಿಗಳಲ್ಲಿ ನೀರು ಹೋದಾಗ ಮತ್ತೆ ಹೂಳು ತೆಗೆಯಲು 500 ರೂಪಾಯಿ ಸಾಲ ಕೊಡುತ್ತಿದ್ದರು, ಆದರೆ ಕೆಲವು ಸಾಲ ಕಟ್ಟಿಲ್ಲವೆಂದು ಅಂಥವರಿಗೆ ಮತ್ತೆ ಸಾಲ ಕೊಡುವುದನ್ನು ನಿಲ್ಲಿಸಿರುವುದು ಸರಿಯೇ ? On the ground that the ryots have not repaid one or two instalments, they are not being given fresh loans. Will Government see that this hardship is overcome ?

Sri M. V. KRISHNAPPA.—Government will examine deepening of wells. Government wants to give nearly Rs. 30 lakhs for deepening of wells. Government will take a decision in four or five days. No money will be allowed to lapse. We are asking all the Deputy Commissioners to have a sort of drive in regard to deepening of wells.

ಶ್ರೀ ಎಸ್. ಗೋಪಾಲಗೌಡ.—ಸಾಲದ ಕಂತುಗಳನ್ನು ವಸೂಲು ಮಾಡುವುದನ್ನು ನಿಲ್ಲಿಸ ಬೇಕೆಂದು ಹೇಳಿದ್ದೀರಲ್ಲಾ, ಆ ಆಜ್ಞೆಯನ್ನು ಯಾವ ನೀತಿನಿಯಮಗಳನ್ನು ಅನುಸರಿಸಿ ಹಾಕಿದ್ದೀರಿ ಇದು ರ್ಯಾಂಡ್ ರೆವಿನ್ಯೂ ರಮಿಷನ್ ಕೋಡ್ ಪ್ರಕಾರವೇ, ಫ್ಯಾಮಿನ್ ಕೋಡ್ ಪ್ರಕಾರವೇ, ಅಲ್ಲದೆ

ಒಂದು ಊರಿನಲ್ಲಿ ಕಂದಾಯ ಕೊಡುವ ಶಕ್ತಿ ಇಲ್ಲವಿದ್ದರೆ ವಸೂಲು ಮಾಡಬೇಡಿ, ಶಕ್ತಿಇದ್ದವರ ಹತ್ತಿರ ವಸೂಲು ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾದ ಅಧಿಕಾರವನ್ನು ಬಿಟ್ಟಿದ್ದೇವೆಂದು ಹೇಳಿದ್ದೀರಲ್ಲಾ, ಇದನ್ನೆಲ್ಲಾ ಯಾವ ಪರಿಪತ್ರದಲ್ಲಿ ಕಾಣಿಸಿದ್ದೀರಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾಧಿಕಾರಿಗಳಿಗೆ ಈ ವಿಚಾರದಲ್ಲಿ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿರುವುದನ್ನು ಒಪ್ಪಿಕೊಳ್ಳುತ್ತೇನೆ. ಜಿಲ್ಲಾಧಿಕಾರಿಗಳು, ಯಾರಿಗಾದರೂ ಕಂದಾಯ ಕೊಡುವ ಶಕ್ತಿ ಇಲ್ಲವೆಂದೆ ವಸೂಲಿಯನ್ನು ನಿಲ್ಲಿಸಬಹುದು.

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮೀಷನ್ ಅಧಿಕಾರಿಗಳು ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಿಗೆ ಬಂದು ನೋಡಿ ಆ ಪ್ರದೇಶಗಳಿಗೆ ಯಾವ ರೀತಿ ಸಹಾಯ ಮಾಡಬೇಕೆಂಬ ವರದಿಯನ್ನು ಕೊಟ್ಟರೋ ಅದನ್ನು ತಾವು ಬಿಡಿಗೆ ಒತ್ತಿದ್ದೀರಿ. ಅವರು ಕಂದಾಯವನ್ನು ಮನ್ನಾಮಾಡಿಕ್ಕಂಥ ತತ್ವವನ್ನೇನಾದರೂ ಸಲಹೆ ಮಾಡಿದ್ದಾರೆಯೇ? ಆದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರು ಹೇಳಿದಂತೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡಬಹುದು. ಏನೋ ಪತ್ರಿಕೆಗಳವರು ಹೇಳಿದರೆ ಅದಕ್ಕೆ ನಾವು ಉತ್ತರ ಕೊಡುವುದಕ್ಕಾಗುವುಲ್ಲ. ಪ್ಲಾನಿಂಗ್ ಕಮೀಷನರ್‌ರವರು ತಮ್ಮ ವರದಿಯನ್ನು ಕೇಂದ್ರ ಸರ್ಕಾರಕ್ಕೆ ವರದಿಮಾಡಿದ್ದಾರೆ. ಅಲ್ಲಿಂದ ಒಂದು ಕಾಪಿ ನಮಗೆ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಂ. ದೇವ್.—ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾದುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ತುಮಕೂರು ಜಿಲ್ಲೆಯ ಕುಣಿಗಲ್, ಚಿಕ್ಕನಾಯಕನಹಳ್ಳಿ, ಸಿರಾ, ಮುಂತಾದ ಕಡೆಗಳಲ್ಲಿ 75 ಭಾಗ ಕಂದಾಯ ವಸೂಲಾಗುವ ಭರವಸೆ ಇಲ್ಲವಿದ್ದರೂ ಸಹ, ಕಂದಾಯ ವಸೂಲು ಮಾಡಲು ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದಾರೆ, ಇದರಲ್ಲೇನಾದರೂ ರಾಜಕೀಯ ಕೈವಾಡ ವಿದೆಯೇ, ಅಥವಾ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿವಳಿಕೆ ಕೊಡುತ್ತೀರಾ ಎಂಬ ವಿಚಾರವಾಗಿ ನಿರ್ದಿಷ್ಟವಾಗಿ ಕೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರನೇಕರು ಈ ವಿಚಾರವನ್ನೇ ಕೇಳುತ್ತಿದ್ದಾರೆ. ಈ ದಿನದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾವು ಯೋಚನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಸರಿಯಾದ ಆದೇಶ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನೈತರುಗಳು ತಮ್ಮ ಜಮೀನಿನಲ್ಲಿ ಎರಡನೇ ಬೆಳೆ ತೆಗೆಯಲು ಹಣ ಖರ್ಚುಮಾಡಿ, ನಂತರ ಫಸಲು ಆಗದೆ ಹೋದರೆ ಅವರಿಂದ ಕಂದಾಯ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್ ಏನಿದೆ, ಅದರ ಪ್ರಕಾರ ಮಾಡುತ್ತೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ಆದೇಶ ಕೊಟ್ಟಿರುವುದರಲ್ಲಿ ಬಾಗಾಯಿತು ಕಂದಾಯ ವಸೂ ಮಾಡಿ, ಖುಷ್ಕಿ ಕಂದಾಯ ರಿಯಾಯಿತಿ ಕೊಡಿ ಎಂದು ಹೇಳಿದ್ದೀರಿ. ಆದರಿಂದ ಕಂದಾಯದ ವಸೂಲಾತಿ ನಿಂತಂತಾಯಿತೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಭೇದಭಾವ ಮಾಡಲಿಲ್ಲ. ಒಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಯಾವ ಪ್ರದೇಶದಲ್ಲಿ ಜನರಿಗೆ ಕೊಡಲಿಕ್ಕೆ ಶಕ್ತಿ ಇಲ್ಲವೋ, ಬೆಳೆ ಇಲ್ಲವೋ ಅಲ್ಲಿ ಪೂರ್ತಿ ವಸೂಲು ಮಾಡದೆ ಸ್ಟಾಪ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದೆ.

Construction of Hostel Buildings.

*Q.—151. Sri D. PARAMESWARAPPA (Honnali).—

Will the Government be pleased to state :—

(*a*) whether any request has been made for the construction of a hostel building for Schedule Castes and Schedule Tribes students at Honnali ;

(*b*) if so, the action taken by them in this respect ?